ಶ್ರೀಮದಾನಂದತೀರ್ಥ ಗುರುಭ್ಯೋನಮಃ

# ಜಯತೀರ್ಥರನ್ನು ಕಂಡ ದಾಸವರೇಣ್ಯರು




ಸಂಗ್ರಹ, ಶೋಧನೆ, ವಿವರಣೆ, ಅನುವಾದ

**ಪ್ರೊ|| ಪಂ|| ಬದರೀನಾಥಾಚಾರ್ಯ ಘೂಳೀ**



**ಮಾಧವ ಮಧ್ವ ಪ್ರಕಾಶನ**

**೧೬೪, ೭ನೇ ಅಡ್ಡರಸ್ತೆ, ೯ನೇ ಮುಖ್ಯರಸ್ತೆ**

**ಬಿ.ಇ.ಎಂ.ಎಲ್. ಬಡಾವಣೆ, ರಾಜರಾಜೇಶ್ವರೀನಗರ**

**ಬೆಂಗಳೂರು – ೫೬೦ ೦೯೮**

ಹರಿಃ ಓಂ

# ಜಯತೀರ್ಥರನ್ನು ಕಂಡ ದಾಸವರೇಣ್ಯರು

## ಶ್ರೀಮದಾಚಾರ್ಯರ ಗ್ರಂಥಗಳಿಗೆ ಅತ್ಯಮೂಲ್ಯವಾದ ಟೀಕಾ ರಚಿಸಿದ ಮಹಾಯೋಗಿಗಳು

ಶ್ರೀಮದಾನಂದತೀರ್ಥರು ಕಂಡುಹಿಡಿದ ಯತಿವರೇಣ್ಯರು ಜಯತೀರ್ಥರಾದರೆ, ಜಯತೀರ್ಥರು ಕಂಡದ್ದು ಶ್ರೀಮದಾಚಾರ್ಯರನ್ನು, ಪಂಚ ಪಾಂಡವರಲ್ಲಿ ಭೀಮಸೇನ ದೇವರೇ ವಿಷ್ಣುಭಕ್ತಾಗ್ರೇಸರರಾದರೂ ಅವರ ನಂತರ ಮಹಾಜ್ಞಾನಿಯಾದ ಅರ್ಜುನನನ್ನು ಕಂಡು ಗೀತೋಪದೇಶ ಮಾಡಿ ತತ್ಫಲವಾಗಿ ಅರ್ಜುನನೇ ಮುಂದೆ ಜಯತೀರ್ಥರಾಗಿ ಅವತರಿಸಿ ವಾಯುದೇವರ ಅವತಾರ ಹೊಂದಿದ ಶ್ರೀಮದಾನಂದತೀರ್ಥರ ಗ್ರಂಥಗಳಿಗೆ ಉತ್ಕೃಷ್ಟ ವ್ಯಾಖ್ಯಾನ (ಟೀಕಾ) ಬರೆದ ಮಹನೀಯರು.

ಜಯತೀರ್ಥರು ಶ್ರೀಮದಾಚಾರ್ಯರನ್ನು ಕಂಡದ್ದು ಅವರ ಗ್ರಂಥಗಳಲ್ಲಿ ಎಂದು ವ್ಯಾಸರಾಜರು ಹೀಗೆ ವರ್ಣಿಸಿರುತ್ತಾರೆ.

**ವ್ಯಾಸಸೂತ್ರಗಳೆಂಬ ಮಂದರವನು ವೇದ**
**ರಾಶಿಯೆಂಬ ವಾರಾಶಿಯೊಳಿಟ್ಟು**
**ಶ್ರೀ ಸರ್ವಜ್ಞರ ವಾಕ್ಯಪಾಶದಿ ಸುತ್ತಿ**
**ಭಾಸುರ ನ್ಯಾಯಸುಧಾ ಪಡೆದ ಯತೀಂದ್ರ**

ಅಲ್ಲದೇ ಶ್ರೀಮನ್ನಾರಾಯಣನ ಗುಣಗಳೆಂಬ ವೇದ ವೇದಾಂತಗಳಲ್ಲಿರುವ ಮಣಿಗಳನ್ನು ಶ್ರೀಮದಾನಂದತೀರ್ಥರು ಸಂಗ್ರಹಿಸಿ ಅವುಗಳನ್ನು ಭಾಷ್ಯರೂಪ ವಾಕ್ಯಗಳಲ್ಲಿ ತಂದು ಉತ್ತಮ ಗ್ರಂಥಗಳಲ್ಲಿ ಜೋಡಿಸಿ, ಭುವಿಯಲ್ಲಿ ಸಜ್ಜನರಿಗೆ ತೋರಿಸಿದರಾದರೂ, ಅವುಗಳಲ್ಲಿ ಅಡಗಿದ ಅರ್ಥಗಾಂಭೀರ್ಯವನ್ನು ಟೀಕಾ ಎಂಬ ವ್ಯಾಖ್ಯಾನ ಮೂಲಕ ತೋರಿಸಿದ ಧೀರ ಶ್ರೀಜಯತೀರ್ಥರೆಂದು ವರ್ಣಿಸಿ ವ್ಯಾಸರಾಜರು ಕೊಂಡಾಡಿದ್ದಾರೆ.

**ಆನಂದತೀರ್ಥೋಪದಿಷ್ಟೋ ನಿಧಿರ್ನಾರಾಯಣಾಹ್ವಯಃ**
**ಪ್ರದರ್ಶಿತೋ ಯೇನ ಸಮ್ಯಕ್ ಜಯತೀರ್ಥಂ ತಮಾಶ್ರಯೇ ।**

ವೈಷ್ಣವ ಸಮಾಜಕ್ಕೆ ಶ್ರೀಮಜ್ಜಯತೀರ್ಥರ ಕೊಡುಗೆ ಎಷ್ಟು ಉತ್ಕೃಷ್ಟವೆಂದು ತಿಳಿಸುತ್ತಾ

**ವನಜನಾಭನ ಗುಣಮಣಿಗಳು ಸರ್ವಜ್ಞ –**
**ಮುನಿಕೃತಗ್ರಂಥಗಳವನಿಯೊಳಡ(ಗಿರೆ) ಸ**
**ಜ್ಜನರಿಗೆ ಟೀಕಾಂಜನದಿಂದ ತೋರಿಸಿ**
**ಘನಸುಖಸಾಧನ ಮಾಡಿದ್ಯೋ ಧೀರ**

ಎಂದಿದ್ದಾರೆ ವ್ಯಾಸರಾಯರು. ಅಲ್ಲದೇ ಶ್ರೀ ಜಯತೀರ್ಥರಿಂದ ರಚಿತ ಸುಧಾವನ್ನು ವರ್ಣಿಸುತ್ತಾ

**ಮಧ್ವಶಾಸ್ತ್ರದುಗ್ಧನಿಧಿಯೊಳ್ ಬುದ್ಧಿಯೆಂಬ ಮಂದರಗಿರಿಯ**
**ಶುದ್ಧನೇ (ಸೂ)ತ್ರದಿಂದ । ಬದ್ಧಮಾಡಿ ಪಿಡಿದು ಕಡಿದು**
**ಶುದ್ಧಯುಕುತಿ ಸುಧೆಯ ತೆಗೆದನ – ಶಿಷ್ಯಜನಕೆ ।**
**ಶ್ರದ್ಧೆಯಿಂದಲದನು ಎರೆದನ–ಕ್ರೋಧದಿಂದ**
**ಕ್ರುದ್ಧವಾದಿಗಳನು ಗೆಲಿದನ–ಜಯಮುನೀಂದ್ರನ**

ಮಧ್ವಶಾಸ್ತ್ರವೆಂಬ ಸಮುದ್ರದಲ್ಲಿರುವ ವಾಕ್ಯಗಳಂತಿರುವ ಮಣಿಗಳನ್ನು ನೀವು ಸಂಗ್ರಹಿಸಿ ಅವುಗಳಿಗೆ ಅಭೂತಪೂರ್ವ ವ್ಯಾಖ್ಯಾನ(ಟೀಕಾ)ವನ್ನು (ಸುಧೆಯನ್ನು) ಯುಕ್ತಿಯಿಂದ ಪೋಣಿಸಿ ಪ್ರಕಾಶಮಾನವಾಗುವಂತೆ ಮಾಡಿ ತಮ್ಮ ಆದಿ, ಮುಂದೆ ಬರುವ ಶಿಷ್ಯ ಸಮುದಾಯಕ್ಕೆ ಶುದ್ಧ ಮಾತುಗಳಿಂದ ತಿಳಿಸಿ ಉಣಿಸಿದ ಮುನಿರಾಯ, ಜಯರಾಯ ॥ ಶ್ರೀಮದಾನಂದತೀರ್ಥರ ಪ್ರತಿಯೊಂದು ವಾಕ್ಯಗಳಿಗೆ ಶ್ರದ್ಧೆಯಿಂದ ಅರ್ಥ ಬರೆಯುವಾಗ ದುಷ್ಟವಾದಿಗಳನ್ನು ಸಯುಕ್ತವಾಗಿ ಪರಾಜಯ ಮಾಡಿದ ವೀರ ಹೀಗೆ ವರ್ಣಿಸುತ್ತಾ ೨೧ ಕುಭಾಷ್ಯಗಳನ್ನು ನಿರಸನ ಮಾಡಿದ ಶ್ರೀಮಧ್ವಾಚಾರ್ಯರ ಭಾಷ್ಯಕ್ಕೆ ತಾತ್ಪರ್ಯ ಬರೆದು ಸಾಧು ಸಜ್ಜನರನ್ನುದ್ಧರಿಸಿ ನಿಜ ಮಾರ್ಗ ತೋರಿಸಿದ ಅಕ್ಷೋಭ್ಯ ತೀರ್ಥ ವರಕುಮಾರ ನನಗೆ ಸನ್ಮಾರ್ಗವನ್ನೆ ದಯಪಾಲಿಸಿದ ಜಯತೀರ್ಥರನ್ನು ಕೊಂಡಾಡಿದರೆ, ಶ್ರೀ ವಾದಿರಾಜರು ಒಬ್ಬ ಯೋಧನಂತೆ ಶತ್ರುಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿರುವುದು ಅತಿ ಮನೋಹರ.

**ಸರಸದಿಂದ ಮೂರೇಳು । ವಿರಸ ದುಷ್ಟಭಾಷ್ಯಗಳನು**
**ತ(ಮು)ರಿದಕ್ಷೋಭ್ಯತೀರ್ಥಯತಿ– । ಕರಸಂಜಾತ ರಮ್ಯಚರಿತ**
**ಶರಣಜನರ ಪೊರೆವ ಯತಿಪನ–ಶಿಷ್ಯಜನರ**



**ದುರುಳ ಮೋಹ ತಿಮಿರ ದಿನಪನ–ನಮ್ಮ ಪರಮ**
**ಗುರು ಶ್ರೀಕೃಷ್ಣ ಪಾದಭಜಕನೆ–ಜಯಮುನೀಂದ್ರನ**

**ಶ್ರೀ ವಾದಿರಾಜರು**

**ಖುಲ್ಲರಾದ ಮಾಯಿಗಳ ಹಲ್ಲ ಮುರಿದು**
**ವಲ್ಲಭ ಜಗಕೆ ಶ್ರೀನಲ್ಲನೆಂದರುಹಿದ(ದಿ)**
**ಮಧ್ವರಾಯರ ಮತ ಶುದ್ಧಶರಧಿಯೊಳ–**
**ಗುದ್ಭವಿಸಿದ ಗುರುಸಿದ್ಧಾಂತಸ್ಥಾಪಕ**

ಶ್ರೀ ವಾದಿರಾಜರು ಪರಮತೀಯರ ದುಷ್ಟಸಿದ್ಧಾಂತವನ್ನು ಖಂಡಿಸಲು ದಾಕ್ಷಿಣ್ಯವೇಕೆ ? ಮಾಯಾವಾದಿಗಳ ಮತ ಎಷ್ಟು ಅಪದ್ಧ ಶಾಸ್ತ್ರವಿರುದ್ಧ ಎಂದು ತಿಳಿಸಲು ಹಿಂದೆ ಮುಂದೆ ನೋಡದೆ ಅವರ ಮನಸ್ಸಿಗೆ ನೋವಾಗುವುದೇನೋ ಎಂದು ತಿಳಿಯದೆ ಟಿಪ್ಪಣಿ ರೂಪ ಖಂಡನೆ ಮಾಡಿರುವುದು ಶ್ರೀಮಧ್ವಮತದಲ್ಲಿ ಟೀಕಾ ಎಷ್ಟಿತ್ತೆಂದು ತಿಳಿದು ಬರುವುದು. ಅದನ್ನೇ ಅವರ ಮಾತಿನಲ್ಲಿ ತಿಳಿಸಲಾಗಿದೆ. ಮಾಯಾವಾದಿಗಳ ಹಲ್ಲು ಮುರಿದಿದ್ದಾರೆ. ಜಯತೀರ್ಥರು ಅನ್ಯಮತೀಯರ ಅಸಂಬದ್ಧ ಪ್ರಲಾಪದಿಂದ ಶ್ರೀಶೇಷಶಾಯಿಯೇ ಈ ವಿಶ್ವಕ್ಕೆ ಏಕೈಕ ದೈವವೆಂದು, ಅದರ ವಿರುದ್ಧವಾಗಿ ಬೋಧಿಸಿದ ದುರ್ವಾದಿಗಳನ್ನು ನಿರಾಕರಿಸಲು ಯೋಗ್ಯವೆಂದು ನಿರ್ಭಯವಾಗಿ ಶ್ರೀಮಧ್ವಾಚಾರ್ಯರ ಸಿದ್ಧಾಂತವೇ ಸರ್ವವೇದಶಾಸ್ತ್ರ ಸಮ್ಮತವೆಂದು ಸ್ಥಾಪಿಸಿದರು.

ಶ್ರೀ ವಾದಿರಾಜರು ಜಯತೀರ್ಥರನ್ನು ಅರ್ಜುನನಿಗೆ ಹೋಲಿಸಿ, ಅರ್ಜುನ ರಣರಂಗದಲ್ಲಿ ಯಾವ ರೀತಿ ಶತ್ರುಸೈನ್ಯವನ್ನು ನುಗ್ಗಿ ತುಂಡು ಮಾಡಿದ ರೀತ್ಯ ಜಯತೀರ್ಥರು (ಇಂದ್ರಾಶನೆಂಬ ಸಾಮ್ಯ ಕೊಟ್ಟು) ಮಾಯಾವಾದಿಗಳೆಂಬ ದುಷ್ಟ ಕುಜನರ ಭಾಷ್ಯಗಳಲ್ಲಿರುವ ದೋಷಗಳನ್ನು ತೋರಿಸಿ ನಂತರ ಖಂಡಿಸಿದ ಮಹಾವೀರನೆಂದು ವರ್ಣಿಸುತ್ತಾರೆ.

ಹೀಗೆ ಅನ್ಯಮತಗಳನ್ನು ನಿರಾಕರಿಸಲು ಶ್ರೀಮಧ್ವರ ಅನುವ್ಯಾಖ್ಯಾನ ಎಂಬ ಕೃತಿಯಲ್ಲಿರುವುದನ್ನು ವ್ಯಾಖ್ಯಾನಿಸಲು ನಿಮ್ಮಲ್ಲಿ ಶ್ರೀಮಧ್ವರೇ ಒಂದು ಅಂಶದಿಂದ ಇರಬೇಕು. ಕುಮತಗಳನ್ನು ನಿರಾಕರಿಸುವಲ್ಲಿ ಶ್ರೀಮಧ್ವಾಚಾರ್ಯರೆ ನಿಮ್ಮಲ್ಲಿ (ನಿಮ್ಮ ಹೃದಯದಲ್ಲಿ) ಸನ್ನಿಹಿತರಾಗಿ ಮಾಡಿಸಿದ ವ್ಯಾಖ್ಯಾ ಸರಣಿಯೇ ಶ್ರೀಮನ್ನ್ಯಾಯಸುಧಾ.

ಹೀಗೆ ಮಾಡುವಲ್ಲಿ ಶ್ರೀ ಜಯತೀರ್ಥರು ಮಧ್ವಸಿದ್ಧಾಂತವನ್ನು ಉದ್ಧಾರ ಮಾಡಿದ ಭೂಪ.

**(ಮಧ್ವರಾಯರೆ ಬಂದು ಮತ್ತೊಂದು ರೂಪದಲಿ ಇದ್ದು**
**ಸಿದ್ಧಾಂತವನು ಇದ್ದು ನುಡಿದಂದದಲಿ)**
**ಮಧ್ವರಾಯರು ಬಂದು ನಿನ್ನೊಳಗೆ ನಿಂದಿರಲು**
**ಬೋಧಮಯ ಸಿದ್ಧಾಂತಮತವನುದ್ಧರಿಸಿದ್ಯೊ**
**ಅದ್ವೈತಮತಗಳ ಭೇದಿಸಿ ಜರೆವಂಥ**
**ಉದ್ಯೋಗದಲ್ಲಿದ್ದು ಉದ್ಧಾರ ಮಾಡಿದ್ಯೊ**

ಶ್ರೀಸಾಮಾನ್ಯ ಸುಧಾ ಎಂಬ ಸುಧೆಯನ್ನು (ಅಮೃತವನ್ನು) ಜ್ಞಾನಿಗಳು ಸವಿದ ಮೇಲೆ ಆನಂದಭರಿತರಾಗಿ ಈವರೆಗೂ ಇದ್ದ ಮೋಹ ಸಂಶಯಗಳನ್ನು ಕಳೆದುಕೊಳ್ಳುವಂತೆ ಮಾಡಿದ ಗುರುಜಯತೀರ್ಥರು ಎಂದಿದ್ದಾರೆ. ಶ್ರೀಮಜ್ಜಯತೀರ್ಥರು ವಿದ್ಯಾರಣ್ಯರೆಂಬ ಪ್ರಖಾಂಡ ಅದ್ವೈತ ಪಂಡಿತರನ್ನು ತಮ್ಮ ವಾಕ್ಯಗಳೆಂಬ ಯುಕ್ತಿಗಳಿಂದ ಮಂಕು ಮಾಡಿದರು. ಆವಾಕ್ಕರನ್ನಾಗಿ ಮಾಡಿದರೆಂದು ಸುಂದರವಾಗಿ ವರ್ಣಿಸಲಾಗಿದೆ.

ಪ್ರಸನ್ನವೆಂಕಟದಾಸರ ಮಾತಿನಲ್ಲಿಯೂ ವರ್ಣಿತವಾಗಿದೆ.

**ವೇದಾಂಬುಧಿಯೊಳು ಸುಧೆದೆಗೆದೆ ರಾಮ–**
**ಪಾದಕರ್ಪಿಸಿ ಬುಧಜನಕೆರೆದೆ**

ಈ ಕೃತಿಯಲ್ಲಿ ಶ್ರೀಮನ್ನ್ಯಾಯಸುಧಾವನ್ನು ರಚಿಸಿ ಶ್ರೀರಾಮಚಂದ್ರನ ಚರಣಗಳಿಗರ್ಪಿಸಿದರೆಂದಿದೆ. ಅಂದರೆ ಆ ಸಮಯಕ್ಕಾಗಲೇ ಶ್ರೀಮೂಲರಾಮ ಸೀತಾದೇವಿಯರ ಪ್ರತಿಮೆಗಳು ಅವರಲ್ಲಿದ್ದಿತೆಂದು ತಿಳಿಸಲಾಗಿದೆ. ಶ್ರೀಮದಾಚಾರ್ಯರು ಶ್ರೀನರಹರಿತೀರ್ಥರಿಂದ ಸೀತಾರಾಮ ಪ್ರತಿಮೆಗಳನ್ನು ಕಳಿಂಗರಾಜನ ಕೋಶಾಗಾರದಲ್ಲಿದ್ದುದನ್ನು ಧರಿಸಿ ಅಕ್ಷೋಭ್ಯತೀರ್ಥರಿಗೆ ಕೊಟ್ಟರೆಂದು ಅವರೇ ಮುಂದೆ ತಮ್ಮ ಶಿಷ್ಯ ಶ್ರೀಮಜ್ಜಯತೀರ್ಥರಿಗೆ ಕೊಟ್ಟರೆಂದು ತಿಳಿಸುತ್ತಾ ಅದೇ ಮೂರ್ತಿಗಳು ಸದ್ಯ ಉತ್ತರಾದಿ ಮಠದಲ್ಲಿ ಇಂದಿಗೂ ಪೂಜಿಸಲ್ಪಡುತ್ತಿದೆ ಎಂದು ಮಾರ್ಮಿಕವಾಗಿ ತಿಳಿಸಿದ್ದಾರೆ.

ಶ್ರೀವಿಜಯದಾಸರು ಶ್ರೀಜಯತೀರ್ಥರ ಬೃಂದಾವನ ದರ್ಶನದಿಂದ ಪುಲಕಿತರಾಗಿ ತಮ್ಮ ಆನಂದಬಾಷ್ಪವನ್ನು ತಡೆಯಲಾರದೆ ಮೈಮರೆತು ಕೊಂಡಾಡಿದ ಪರಿ.



**ಆವ ಜನುಮದ ಪುಣ್ಯ ಫಲಿಸಿತು ಎನಗಿಂದು**
**ರಾವುತರಾಗಿದ್ದ ಜಯತೀರ್ಥರ ಕಂಡೆ**

ವೈಷ್ಣವಜನ್ಮ ಬರುವುದು ಅತಿದುರ್ಲಭ, ಅಂಥಾದ್ದರಲ್ಲಿ ಈಗ ಶ್ರೀಹರಿ ಕರುಣಿಸಿರುತ್ತಾನೆ – ಸಾಧನಕ್ಕೆ ಯೋಗ್ಯ ಶರೀರವೆಂದು.

**ವೈಷ್ಣವಜನ್ಮ ಬಂದುದಕಿದೇ ಸಾಧನ**
**ವಿಷ್ಣುವಿನ ಭಕುತಿ ದೊರಕಿದುದಕೆ**
**ನಷ್ಟವಾಯಿತು ಎನ್ನ ಸಂಚಿತಾಗಾಮಿಕರ್ಮ**
**ಕಷ್ಟದಾರಿದ್ರ್ಯಗಳು ಹಿಂದಾದವೊ**
**ತುಷ್ಟನಾದೆನು ಎನ್ನ ಕುಲಕೋಟಿ ಸಹಿತ ಅ–**
**ನಿಷ್ಟಮಾರ್ಗಕೆ ಇನ್ನು ಪೋಪೆ ನಾನು**
**ಸೃಷ್ಟಿಯೊಳಗೆ ಇವರ ದರುಶನವಾಗದಲೆ**
**ಸ್ಪಷ್ಟವಾದ ಜ್ಞಾನ ಪುಟ್ಟದ್ಯೆಯ್ಯಾ**
**ಇಷ್ಟುಕಾಲ ಬಿಡದೆ ಮುಂದೆ ಮಾಡುವ ಬಲು**
**ನಿಷ್ಠಾ(ಷ್ಠೆ)ಗೆ ಅನುಕೂಲ ತಾತ್ವಿಕರು**
**ಶಿಷ್ಟಾಚಾರವನ್ನು ಮೀರದಲೆ ನಿಮ್ಮ**
**ಇಷ್ಟಾರ್ಥ ಬಯಸುವುದು ಉಚಿತದಲ್ಲಿ**
**ವೈಷ್ಣವಾಚಾರ್ಯರ ಮತ ಉದ್ಧಾರಕರ್ತ**
**ಭ್ರಷ್ಟವಾದಿಗಳನ್ನು ನುಗ್ಗೊತ್ತಿ (ನುಗ್ಗಲೊತ್ತಿ)**
**ಕೃಷ್ಣವಂದಿತ ನಮ್ಮ ವಿಜಯವಿಠಲರೇಯನ**
**ಅಷ್ಟಕರ್ತೃತ್ವವ ಸ್ಥಾಪಿಸಿದ ಧೀರ**

ಶ್ರೀಜಯತೀರ್ಥರನ್ನು ಸ್ತುತಿಸುವಾಗ ವಿಜಯದಾಸರು ತಮ್ಮ ಪೂರ್ವಜನ್ಮ ವೃತ್ತಾಂತವನ್ನು ಸೂಕ್ಷ್ಮವಾಗಿ ತಿಳಿಸುತ್ತಾರೆ.

**ಈ ಮುನಿ ಒಲಿದರೆ ಅವನೆ ಭಾಗ್ಯವಂತ**
**ಭೂಮಿಯೊಳಗೆ ಮುಕ್ತಿ ಯೋಗ್ಯನೆನಿಸುವನು**
**ಭೀಮಭವಾಂಬುಧಿ ಬತ್ತಿ ಪೋಗುವುದು ನಿ–**
**ಸ್ಸೀಮನಾಗುವ ಪಂಚಭೇದಾರ್ಥಪ್ರಪಂಚ(ಮೇಯ)ದಲ್ಲಿ**
**ತಾಮಸಜನರಿಗ ಭಕ್ತಿಪುಟ್ಟದು ದುಃ–**
**ಖಮಹೋದಧಿಯೊಳು ಸೂಸುತಲಿಪ್ಪರು**

**ಸ್ವಾಮಿ ಈಗಲೆ ಬಂದು ದುರುಳ ಮನುಜರ(ನ್ನ) ನೋಡಿ**
**ನಾ ಮೊರೆಯಿಡುವೆನು ಕಾಯೊ ಕರುಣದಲಿ**
**ಯಾಮಯಾಮಕೆ ನಿಮ್ಮ ಸ್ಮರಣೆ ಪಾಲಿಸಿ ಉ–**
**ತ್ತಮ ಬುದ್ಧಿಯ ಕೊಟ್ಟು ಕೃತಾರ್ಥನ್ನ ಮಾಡು**
**ರಾಮ ಸುಗುಣಧಾಮ ವಿಜಯವಿಠಲರೇಯನ**
**ನಾಮ ಕೊಂಡಾಡುವ ಟೀಕಾಚಾರ್ಯ**

ಕಾಲಕಾಲಕ್ಕೆ ನಿಮ್ಮ ನಾಮಸ್ಮರಣೆ ಸದಾ ಬಿಡದೆ ಸ್ಮರಿಸುವಂತೆ ಪ್ರಾರ್ಥನೆ ಎಷ್ಟು ಅರ್ಥಗರ್ಭಿತವಾಗಿರುವುದು.

## ಶ್ರೀಜಗನ್ನಾಥದಾಸರು

**ಸುರನಾಥನೆ ನೀ ನರನಾವೇಶ (ಷ)ದಿ**
**ಧರಣಿಯೊಳಗೆ ಅವತರಿಸಿದಿ**
**ವಿದ್ವನ್ಮಂಡಲಿಸದ್ವಿನುತನೆ ಪಾ–**
**ದದ್ವಯಕೆರಗುವೆ ಉದ್ಧರಿಸೆನ್ನನು**
**.................................**
**ಗುರುಪೂರ್ಣಪ್ರಜ್ಞರ ಸನ್ಮತವನು**
**ಉದ್ಧರಿಸಿ ಮೆರೆದೆ ಭೂಸುರವರ ವರದಾ**

ವ್ಯಾಸತತ್ವಜ್ಞರು ಜಯತೀರ್ಥರನ್ನು ಒಬ್ಬ ಯೋಧನಂತೆ ವರ್ಣಿಸುತ್ತಾ,

**ಸರಿಯಾರೈ ಜಯಮುನಿ ಸಮರಾರೈ**
**ಗುರುಮಧ್ವಕೃತಿವಿವೃತಿ ರಚಿಸುವಲ್ಲಿ**

**ವರ್ಣ ಒಂದಾದರು ಬಿಡದಲೆ ಬಹುಫಲ**
**ವರ್ಣಿಪೆ ಲೋಭದಿ ಶರಣಜನರಿಗೆ**
**ಕರ್ಣಸುಧಾರಸ ಬೆರೆದು ನೀ ಬಲು ಗೂಢ–**
**ಪೂರ್ಣಮತಿಭಾವವ ತೆಗೆವತಿ ಶೂರ**

ಶ್ರೀಮದಾಚಾರ್ಯರ ಕೃತಿಗಳಲ್ಲಿ ೧ಲಕ್ಕೆ ರೂಪವ್ಯಾಖ್ಯಾನ ಬರೆಯುವಲ್ಲಿ ಮೂಲ ಶ್ಲೋಕಗಳಲ್ಲಿ ಒಂದನ್ನೂ ಬಿಡದೆ ವ್ಯಾಖ್ಯಾನಿಸಿ, ಆಚಾರ್ಯರ ಅಂತರಂಗ ಭಾವಗಳನ್ನು ವಿಸ್ತಾರವಾಗಿ ತಿಳಿಸಿ ಕೇಳುವವರಿಗೆ ಆನಂದವಾಗುವ ರೀತಿ ಸುಧಾಪಾನ ಮಾಡಿಸಿದ ಶೂರ.



ಬರೆಯುವಾಗ ಪ್ರಾಣೌತ್ತರ ವಾಕ್ಯಗಳಿಗೆ ಸಂಗತಿ ಕೊಡುತ್ತಾ ದುರ್ವಾದಿಗಳ ಕಾಲನ್ನೇ ಕತ್ತರಿಸಿದ ಮಹಾಶೂರ. ಅದು ಹೇಗೇ ಎಂದು ಸುಂದರವಾಗಿ ವರ್ಣಿಸಿದ್ದಾರೆ.

**ಕತ್ತಿಯ ಒಂದೇ ಹಿಡದೆ ಬಿಡದಲೇವೆ**
**ಹತ್ತುದಿಕ್ಕಿಗೆ ತಿರಿಗಿಪ್ಪ ವೀರನ ತೆರ**
**ಅತ್ಯರ್ಥಮೂಲವನೆ ಹಿಡಿದು ಅದರಿಂದ**
**ಸುತ್ತಿಸಿ ವಿಮತರ ಕತ್ತರಿಸುವ ಧೀರ**

ಶ್ರೀಮದಾಚಾರ್ಯರ ಒಂದೇ ವಚನ **''ಪ್ರತ್ಯೇಕ ಪ್ರಾಮಾಣ ಆಗಮಸ್ಯ ಏವ ಹಿಃ''** ಎಂಬ ಕತ್ತಿಯಿಂದ ಸಮಸ್ತ ದುಷ್ಟ ಮತಗಳನ್ನು ಚಿಂದಿ ಚಿಂದಿಯಾಗಿ ಮಾಡಿದ ಧೀರನೆಂದಿದ್ದಾರೆ.

**ದುರ್ಮಾಯಿಮತಗಳ ಮರ್ಮ ಭೇದಿಸಿ ಸುಧಾ–**
**ನಿರ್ಮಾಣಮಾಡಿದ ಸನ್ಮಾನ್ಯರ**

ಹೀಗೆ ವರ್ಣಿಸುವಲ್ಲಿ ಒಂದು ಚಮತ್ಕಾರವಿದೆ –

ದುರ್ವಾದಿಗಳೆಂದು ಮಾಯಾವಾದಿಗಳಷ್ಟನ್ನಲ್ಲದೇ ಅದೇ ರೀತಿಯ ಅನ್ಯ ದುಷ್ಟ ಮತಗಳಲ್ಲಿರುವ ಅಪವ್ಯಾಖ್ಯಾನಗಳನ್ನು ಕೂಲಂಕುಶವಾಗಿ ಅನುವಾದ ಮಾಡಿ ಅವುಗಳಲ್ಲಿರುವ ದೋಷಗಳನ್ನು ಲೋಕಕ್ಕೆ ತಿಳಿಸಿಕೊಟ್ಟು ನಿಜ ಸನ್ಮಾರ್ಗವನ್ನು ತೋರಿಸಲು ನ್ಯಾಯಸುಧಾವೆಂಬ ಉತ್ತಮ ಕೃತಿಯನ್ನು ರಚಿಸಿದರೆಂದು ವರ್ಣಿಸಿರುತ್ತಾರೆ.

## ಶ್ರೀಮಜ್ಜಯತೀರ್ಥರ ರೂಪ ವರ್ಣನೆ

**ಲಲಿತೋರ್ಧ್ವಪುಂಡ್ರ ಶ್ರೀತುಳಸಿಭೂಷಿತಕರ್ಣ–**
**ವಿಲಸಿತ ಕಾಷಾಯಧಾರ್ಯರಾ**

ಎಂದು ವಾಸುದೇವನ ಸದಾ ಭಜಿಸುವರೆಂದು ಹೇಳಿದ್ದಾರೆ.

ಶ್ರೀಮಜ್ಜಯತೀರ್ಥರ ಮೂಲ ಬೃಂದಾವನ ಮಳಖೇಡ ಕಾಗಿಣೀ ತೀರ ವಾಸರೆಂದು ಸಹ ಸ್ಪಷ್ಟವಾಗಿ ತಿಳಿಸಿರುತ್ತಾರೆ ಪರದೇಶ ವಿಠಲದಾಸರು.

**ಲಲಿತ ಮಂಗಳವೇಡಿಸ್ಥ ರಘುನಾಥ – ವನಿತಾಸಂಜಾತ**
**ನಿಲಯ ಮಳಖೇಡ ಕಾಗಿಣಿ ತೀರ – ವಾಸ ತಾಪತ್ರಯದೂರ**
**ನಲಿವ ವರದೇಶವಿಠಲನ ಒಲುಮೆಯ**
**ಇಳೆಯೊಳು ಬೋಧಿಪ ಅಲವಬೋಧಾಪ್ತಾ**

ನವಬೃಂದಾವನದಲ್ಲಿ ಹೀಗಿರುವಾಗ ಶ್ರೀಜಯತೀರ್ಥರ ಬೃಂದಾವನ ನವಬೃಂದಾವನದಲ್ಲಿರುವುದಾಗಿ ತಪ್ಪು ವಿವರಣೆ ಇರುವುದಾಗಿ ತಿಳಿಯಬೇಕು. ಇದನ್ನು ಪುಷ್ಟೀಕರಿಸಲು ಶ್ರೀ ವ್ಯಾಸವಿಠಲಾಂಕಿತ ಕಲ್ಲೂರು ಸುಬ್ಬಣ್ಣಾಚಾರ್ಯರ ಕೃತಿಯಲ್ಲಿಯೂ ಮಳಖೇಡದಲ್ಲಿಯೇ ಜಯತೀರ್ಥರ ಮೂಲ ಬೃಂದಾವನ ಇರುವುದಾಗಿ ತಿಳಿಸುತ್ತಾರೆ.

**ಆಷಾಢಬಹುಳ ಪಂಚಮಿಯು ಬರುತ ಕಳೇ(ಬ)ವರವನೆ ಬಿಡುತ**
**ವ್ಯಾಸವಿಠಲನ ಪಾದದಲೆ ನಿರುತ–ಮಳಖೇಡದೊಳು ಸತತ**
**ವಾಸಿಪ ಪಾವಿನ ತೆರದೊಳ್ ಪ್ರಖ್ಯಾತ – ನಿಜಗುಣಗಣಭರಿತ**
**ಬೇಸರದಲೆ ಕೊಂಡಾಡಿದರೆ ನಿತ್ಯ–ಇಷ್ಟಾರ್ಥವನಿತ್ತ**

“The Mortal remains of Jayathirtha lies enshrnied in Malkhed on the sacred bank of Kagini river” - (Dr. R. Nagaraja Sharma)

Even some Advaitins have not disputed that Sri Jayathirtha’s Brindavan is interned at Malkhed.